# ದೇವರಿಂದ ಕ್ಷಮಿಸಲ್ಪಟ್ಟಿರುವುದು

GOSPEL 316

***"ಯಾವನ ದ್ರೋಹವು ಪರಿಹಾರವಾಗಿದೆಯೋ ಯಾವನ ಪಾಪವು ಕ್ಷಮಿಸಲ್ಪಟ್ಟಿದೆಯೋ ಅವನೇ ಧನ್ಯನು!" ಕೀರ್ತನೆಗಳು 32:1***

ನಾವು ಮಾಡುವ ತಪ್ಪುಗಳು (ಸತ್ಯವೇದದಲ್ಲಿ ಪಾಪ ಎಂದು ಕರೆಯಲ್ಪಡುವವು) ನಮ್ಮನ್ನು ದೇವರಿಂದ ಅಗಲಿಸುತ್ತವೆ. ನಾವು ದೇವರೊಂದಿಗೆ ಸರಿಯಾಗಲು ... ನಿತ್ಯತ್ವಕ್ಕಾಗಿ ಸಿದ್ಧರಾಗಲು, ನಾವು ದೇವರಿಂದ ಕ್ಷಮಿಸಲ್ಪಡಬೇಕಾಗಿದೆ. ಸತ್ಯವೇದದ ಪ್ರಕಾರ ಕ್ಷಮಿಸುವುದು ಅಂದರೆ ಆ ಪಾಪಗಳನ್ನು ಕಡೆಗಣಿಸಲಾಗಿದೆ ಮತ್ತು ಆ ಪಾಪಗಳಿಗಾಗಿ ನಿತ್ಯಶಿಕ್ಷೆಯನ್ನು ಅಳಿಸಲಾಗಿದೆ ಎಂಬ ಅರ್ಥದಲ್ಲಿ ದೇವರು ಹೇಳುತ್ತಿಲ್ಲ. ಇಲ್ಲ, ಆ ಕ್ರಯವನ್ನು ಕಟ್ಟಲೇ ಬೇಕು. ಒಂದು ಶುಭ ಸಮಾಚಾರ ಏನೆಂದರೆ (ಸುವಾರ್ತೆ) ಯೇಸು [ಪಾಪರಹಿತವಾದ ದೇವರ-ಮನುಷ್ಯನು] ಶಿಲುಬೆಯ ಮೇಲೆ ಸಾಯುವ ಮೂಲಕ ಆತನ ರಕ್ತದಿಂದ ಮುಂದಾಗಿ ಕ್ರಯವನ್ನು ಕಟ್ಟಿದನು. ಅದರ ಅರ್ಥ, ಆತನು ನಿಮ್ಮ ಸ್ಥಾನವನ್ನು ತೆಗೆದುಕೊಂಡನು. ಯೇಸು ನಿಮ್ಮ ಪರವಾಗಿ ಯಜ್ಞವಾದನು. ಆದರೆ ಅದು ಸಾಕಾಗುವದಿಲ್ಲ. ಆ ಕ್ರಯವನ್ನು ನಿಮಗೆ ಅನ್ವಯಿಸಬೇಕು ... ನಿಮ್ಮ ಲೆಕ್ಕಕ್ಕೆ ಸೇರಿಸಲಾಗಿದೆ. ಇಲ್ಲಿ ಮುಖ್ಯವಾಗಿ ಇರುವ ಪ್ರಶ್ನೆ, ಅದು ಹೇಗೆ ಸಂಭವಿಸುತ್ತದೆ? ನೀವು ಪಶ್ಚಾತ್ತಾಪಪಡುವಾಗ (ನಿಮ್ಮ ಪಾಪಗಳಿಂದ ದೇವರ ಕಡೆಗೆ ತಿರುಗಿಕೊಳ್ಳುವುದು) ಮತ್ತು ಯೇಸುವನ್ನು ನಂಬುವಾಗ ಅದು ಸಂಭವಿಸುತ್ತದೆ. ಅದರ ನಂತರ, ಮತ್ತು ಆಗ ಮಾತ್ರ, ನೀವು ದೇವರಿಂದ ಕ್ಷಮಿಸಲ್ಪಡುತ್ತೀರಿ.

## *ನಮ್ಮ ಸಮಸ್ಯೆ ... ಪ್ರತ್ಯೇಕತೆ*

*"ಎಲ್ಲರೂ ಪಾಪಮಾಡಿ ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆ."* ರೋಮಾ 3:23

*"ಆದರೆ ನಿಮ್ಮ ಅಪರಾಧಗಳೇ ನಿಮ್ಮ ದೇವರಿಂದ ನಿಮ್ಮನ್ನು ಅಗಲಿಸುತ್ತಾ ಬಂದಿವೆ; ನಿಮ್ಮ ಪಾಪಗಳೇ ಆತನು ಕೇಳಲಾರದಂತೆ ಆತನ ಮುಖಕ್ಕೆ ಅಡ್ಡವಾಗಿವೆ."* ಪ್ರವಾದಿ ಯೆಶಾಯನ ಗ್ರಂಥ 59:2

*"ಆಗ ನಮ್ಮ ಕರ್ತನಾದ ಯೇಸುವು ದೇವರನ್ನರಿಯದವರಿಗೂ ತನ್ನ ಸುವಾರ್ತೆಗೆ ಒಳಪಡದವರಿಗೂ ಪ್ರತೀಕಾರವನ್ನು ಸಲ್ಲಿಸುವನು. ಆ ದಿನದಲ್ಲಿ ಆತನು ತನ್ನ ಪವಿತ್ರರ ಮೂಲಕ ಪ್ರಭಾವ ಹೊಂದುವವನಾಗಿಯೂ ನಾವು ನಿಮಗೆ ಹೇಳಿದ ಸಾಕ್ಷಿಯನ್ನು ನಂಬಿದವರೆಲ್ಲರ ಮೂಲಕ ತನ್ನ ವಿಷಯದಲ್ಲಿ ಆಶ್ಚರ್ಯ ಹುಟ್ಟಿಸುವವನಾಗಿಯೂ ಬರುವಾಗ ಅಂಥವರು ಕರ್ತನ ಸಮ್ಮುಖಕ್ಕೂ ಆತನ ಪರಾಕ್ರಮದ ವೈಭವಕ್ಕೂ ದೂರವಾಗಿ ನಿತ್ಯನಾಶನವೆಂಬ ದಂಡನೆಯನ್ನು ಅನುಭವಿಸುವರು."* 2 ಸಲೋನಿಕದವರಿಗೆ 1:8-10

*"ಯಾಕಂದರೆ ಪಾಪವು ಕೊಡುವ ಸಂಬಳ ಮರಣ; ದೇವರ ಉಚಿತಾರ್ಥವರವು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರುವ ನಿತ್ಯಜೀವ."* ರೋಮಾ 6:23

*"ನಾವು ಅಶಕ್ತರಾಗಿದ್ದಾಗಲೇ ಕ್ರಿಸ್ತನು ನೇಮಿತ ಕಾಲದಲ್ಲಿ ಭಕ್ತಿಹೀನರಿಗೋಸ್ಕರ ಪ್ರಾಣಕೊಟ್ಟನು."* ರೋಮಾ 5:6

## *ದೇವರ ಪರಿಹಾರ ... ಪರ್ಯಾಯವಾಗಿ*

*"ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು; ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು."* ಯೋಹಾನ 3:16

*"ನಾವು ದೇವರನ್ನು ಪ್ರೀತಿಸಿದ್ದರಲ್ಲಿಯಲ್ಲ, ಆತನು ನಮ್ಮನ್ನು ಪ್ರೀತಿಸಿ ನಮ್ಮ ಪಾಪನಿವಾರಣಾರ್ಥವಾಗಿ ತನ್ನ ಮಗನನ್ನು ಕಳುಹಿಸಿಕೊಟ್ಟದರಲ್ಲಿಯೇ ಪ್ರೀತಿಯ ನಿಜ ಗುಣವು ತೋರಿ ಬರುತ್ತದೆ. [ಸಂತೃಪ್ತಿಯ ಯಜ್ಞ] ನಿಮಗಾಗಿ ಅರ್ಪಿಸಿದನು."* 1 ಯೋಹಾನನು 4:10

*"ಆದರೆ ನಾವು ಪಾಪಿಗಳಾಗಿದ್ದಾಗಲೂ ಕ್ರಿಸ್ತನು ನಮಗೋಸ್ಕರ ಪ್ರಾಣ ಕೊಟ್ಟದ್ದರಲ್ಲಿ ದೇವರು ನಮ್ಮ ಮೇಲೆ ತನಗಿರುವ ಪ್ರೀತಿಯನ್ನು ಸಿದ್ಧಾಂತಪಡಿಸಿದ್ದಾನೆ."* ರೋಮಾ 5:8

*"ನಾವು ಪಾಪದ ಪಾಲಿಗೆ ಸತ್ತು ನೀತಿವಂತರಾಗಿ ಜೀವಿಸುವಂತೆ ಆತನು ನಮ್ಮ ಪಾಪಗಳನ್ನು ತಾನೇ ತನ್ನ ದೇಹದಲ್ಲಿ ಹೊತ್ತುಕೊಂಡು ಮರಣದ ಕಂಬವನ್ನು ಏರಿದನು; ಆತನ ಬಾಸುಂಡೆಗಳಿಂದ ನಿಮಗೆ ಗುಣವಾಯಿತು."* 1 ಪೇತ್ರನು 2:24

*"ಯಾರಾರು ಆತನನ್ನು ಅಂಗೀಕರಿಸಿದರೋ, [ಯೇಸು] ಅಂದರೆ ಆತನ ಹೆಸರಿನಲ್ಲಿ ನಂಬಿಕೆಯಿಟ್ಟರೋ, ಅವರಿಗೆ ದೇವರ ಮಕ್ಕಳಾಗುವ ಅಧಿಕಾರ ಕೊಟ್ಟನು."* ಯೋಹಾನ 1:12

## *ಯೇಸುವಿನಲ್ಲಿ ನಂಬಿಕೆಯಿಡಲು ... ಕ್ಷಮಾಪಣೆಗಾಗಿ ನಿಮ್ಮ ಮಾರ್ಗ*

*"ಆತನಲ್ಲಿ [ಯೇಸುವಿನಲ್ಲಿ] ನಂಬಿಕೆಯಿಡುವ ಪ್ರತಿಯೊಬ್ಬನು ಆತನ ಹೆಸರಿನ ಮೂಲಕವಾಗಿ ಪಾಪಪರಿಹಾರವನ್ನು ಹೊಂದುವನೆಂದು ಆತನ ವಿಷಯದಲ್ಲಿ ಪ್ರವಾದಿಗಳೆಲ್ಲರು ಸಾಕ್ಷಿಹೇಳಿದ್ದಾರೆ ಅಂದನು,"* ಅಪೊ ಕೃ 10:43. *"ನಂಬಿಕೆಯ ಮೂಲಕ ಕೃಪೆಯಿಂದಲೇ ರಕ್ಷಣೆ ಹೊಂದಿದವರಾಗಿದ್ದೀರಿ. ಆ ರಕ್ಷಣೆಯು ನಿಮ್ಮಿಂದುಂಟಾದದ್ದಲ್ಲ, ಅದು ದೇವರ ವರವೇ. ಅದು ಪುಣ್ಯಕ್ರಿಯೆಗಳಿಂದ ಉಂಟಾದದ್ದಲ್ಲ; ಆದದರಿಂದ ಹೊಗಳಿಕೊಳ್ಳುವದಕ್ಕೆ ಯಾರಿಗೂ ಆಸ್ಪದವಿಲ್ಲ."* ಎಫೆ 2:8-9 ಪಶ್ಚಾತ್ತಾಪಪಡುವ ಮೂಲಕ ನೀವು ಯೇಸುವಿನಲ್ಲಿ (ಅದನ್ನು ಕುರಿತು ನಂಬುವುದು ಮಾತ್ರವಲ್ಲ) ನಂಬಿಕೆಯಿಡಬಹುದು ... ಅದು ಯೇಸುವಿನ ಕಡೆಗೆ ನಂಬಿಕೆಯಿಂದ ತಿರುಗುವುದು. ಅದನ್ನು ಮಾಡಲು ಈ ಪ್ರಾರ್ಥನೆಯು ಒಂದು ಮಾರ್ಗವಾಗಿದೆ. ಇದು ಒಂದು ಪ್ರತಿಜ್ಞೆ ಅಥವಾ ಮಂತ್ರಪಠನವಲ್ಲ. ಒಂದು ವೇಳೆ ಇದು ನಿಮ್ಮ ಹೃದಯದ ಆಸೆಯೇ ಆಗಿದ್ದಲ್ಲಿ ಹೀಗೆ ಪ್ರಾರ್ಥಿಸಿ.

**ಪ್ರಿಯ ದೇವರೇ,**<br>
**ನಾನು ನನ್ನ ಅಗತ್ಯವನ್ನುಒಪ್ಪಿಕೊಳ್ಳುತ್ತೇನೆ ... ನಾನು ಪಾಪಿಯಾಗಿದ್ದೇನೆ.**<br>
**ನಾನು ಪಶ್ಚಾತ್ತಾಪಪಡುತ್ತೇನೆ ... ನನ್ನ ಪಾಪಗಳಿಂದ ನಿನ್ನ ಕಡೆಗೆ ತಿರುಗಿಕೊಳ್ಳುತ್ತೇನೆ.**<br>
**ನಾನು ಯೇಸುವಿನಲ್ಲಿ ನಂಬಿಕೆಯಿಡುತ್ತೇನೆ ... ದೇವರಾಗಿದ್ದು, ಆತನು ನನಗಾಗಿ ಶಿಲುಬೆಯ ಮೇಲೆ ಸತ್ತನು.**<br>
**ಆತನನ್ನು ನನ್ನ ರಕ್ಷಕನನ್ನಾಗಿ ಆಹ್ವಾನಿಸುತ್ತೇನೆ.**<br>
**ಆಮೆನ್**

ಯೇಸು ನಿಮ್ಮ ಪಾಪಗಳಿಗಾಗಿ ಕ್ರಯವನ್ನು ಕೊಟ್ಟನು. ಮತ್ತು ಯೇಸುವಿನಲ್ಲಿ ನಂಬಿಕೆಯಿಡುವ ಮೂಲಕ, ಆತನ ಕ್ರಯವು ನಿಮ್ಮ ಕ್ರಯವಾಗಿ ಮಾರ್ಪಟ್ಟಿದೆ. ನೀವು ದೇವರಿಂದ ಕ್ಷಮಿಸಲ್ಪಟ್ಟಿದ್ದೀರಿ. ಮತ್ತು ನೀವು ನಿತ್ಯತ್ವಕ್ಕಾಗಿ ಸುರಕ್ಷಿತವಾಗಿದ್ದೀರಿ ಎಂದು ಯೇಸು ಹೇಳಿದನು, ಯೋಹಾನ 3:16.



***"ಯಾವನ ದ್ರೋಹವು ಪರಿಹಾರವಾಗಿದೆಯೋ ಯಾವನ ಪಾಪವು ಕ್ಷಮಿಸಲ್ಪಟ್ಟಿದೆಯೋ ಅವನೇ ಧನ್ಯನು!" ಕೀರ್ತನೆಗಳು 32:1***

*ದೇವರಿಂದ ಕ್ಷಮಿಸಲ್ಪಟ್ಟಿದ್ದೀರಿ ಎಂಬುದನ್ನು ಉಚಿತ ಪಿಡಿಎಫ್‌ಗಳಲ್ಲಿ ಹೆಚ್ಚಿನ ಭಾಷೆಗಳಲ್ಲಿ* Gospel316.org. *ರಿಂದ ಸೇರಿಸಲಾಗಿದೆ.*

**ನೀವು ಆ ಪ್ರಾರ್ಥನೆಯನ್ನು ಪ್ರಾಮಾಣಿಕವಾಗಿ ಮಾಡಿದ್ದರೆ,** ನೀವು ದೇವರಿಂದ ಕ್ಷಮಿಸಲ್ಪಟ್ಟಿದ್ದೀರಿ ಮತ್ತು ನಿತ್ಯತ್ವಕ್ಕಾಗಿ ನೀವು ಆತನೊಂದಿಗೆ ಸುರಕ್ಷಿತರಾಗಿರುತ್ತೀರಿ. ಯೇಸುವಿನ ತ್ಯಾಗವುಳ್ಳ ಮರಣವು ನಿಮಗೆ ಕ್ಷಮಾಪಣೆಯನ್ನು ನೀಡಿದೆ. ನಿಮ್ಮ ಈಗಿನ ಸ್ವಾಸ್ತ್ಯವಾಗಿ ನೀವು ನಿತ್ಯಜೀವವನ್ನು ಹೊಂದಿದ್ದೀರಿ ಎಂದು ದೇವರು ನಿಮಗೆ ವಾಗ್ದಾನ ಮಾಡಿದ್ದಾನೆ ... ಇದರಿಂದ ನೀವು ನ್ಯಾಯತೀರ್ಪಿಗೆ ಒಳಗಾಗುವುದಿಲ್ಲ ... ಮತ್ತು ನೀವು ಮರಣದಿಂದ ಜೀವಕ್ಕೆ ಹಾದುಹೋಗಿದ್ದೀರಿ, ಯೋಹಾನ 5:24. ನೀವು ಸುರಕ್ಷಿತರಾಗಿದ್ದೀರಿ ಯಾಕಂದರೆ ಆತನ ಸರ್ವಶಕ್ತಿಯುಳ್ಳ ಹಸ್ತದಿಂದ ನಿಮ್ಮನ್ನು ಯಾರೂ ಕಸಿದುಕೊಳ್ಳಲು ಸಾಧ್ಯವಿಲ್ಲ. ನೀವು ಆತನನ್ನು ಹಿಡಿದುಕೊಳ್ಳುವುದಕ್ಕಿಂತ ಹೆಚ್ಚಾಗಿ ಆತನು ನಿಮ್ಮ ಹಿಡಿದುಕೊಂಡಿದ್ದಾನೆ. ಯೇಸು ಹೀಗೆ ಹೇಳಿದನು, *"ನಾನು ಅವುಗಳಿಗೆ ನಿತ್ಯಜೀವವನ್ನು ಕೊಡುತ್ತೇನೆ; ಅವು ಎಂದಿಗೂ ನಾಶವಾಗುವದೇ ಇಲ್ಲ; ಅವುಗಳನ್ನು ಯಾರೂ ನನ್ನ ಕೈಯೊಳಗಿಂದ ಕಸಕೊಳ್ಳರು. ನನ್ನ ತಂದೆಯು ನನಗೆ ಕೊಟ್ಟದ್ದು ಎಲ್ಲಾದ್ದಕ್ಕಿಂತ ದೊಡ್ಡದು; ಅದನ್ನು ತಂದೆಯ ಕೈಯೊಳಗಿಂದ ಯಾರೂ ಕಸಕೊಳ್ಳಲಾರರು,"* ಯೋಹಾನ 10:28-29.

**ನೀವು ಆ ಪ್ರಾರ್ಥನೆಯನ್ನು ಮಾಡಲು ಸಿದ್ಧರಾಗಿರದಿದ್ದರೆ,** ಅದನ್ನು ನಿಮ್ಮ ಹೆಚ್ಚಿನ ಆದ್ಯತೆಯನ್ನಾಗಿ ಮಾಡಿ. ನಿಮ್ಮ ನಿರ್ಧಾರವು ಶಾಶ್ವತ ಪ್ರಾಮುಖ್ಯತೆ ಮತ್ತು ಪರಿಣಾಮವನ್ನು ಬೀರುತ್ತದೆ. ಮರಣವನ್ನು ಮೀರಿ ಎರಡನೆಯ ಅವಕಾಶವು ಇರುವುದಿಲ್ಲ, *"ಒಂದೇ ಸಾರಿ ಸಾಯುವದೂ ಆಮೇಲೆ ನ್ಯಾಯತೀರ್ಪೂ ಮನುಷ್ಯರಿಗೆ ಹೇಗೆ ನೇಮಕವಾಗಿದೆಯೋ ಹಾಗೆಯೇ ಕ್ರಿಸ್ತನು ಸಹ ಬಹುಜನರ ಪಾಪಗಳನ್ನು ಹೊತ್ತುಕೊಳ್ಳುವದಕ್ಕೋಸ್ಕರ ಒಂದೇ ಸಾರಿ ಸಮರ್ಪಿತನಾದನು"* ಇಬ್ರಿಯರಿಗೆ 9:27. ನಿಮ್ಮ ನಿರ್ಧಾರಗಳ ಮಾರ್ಗದಲ್ಲಿ ನಿಲ್ಲುವ ಉತ್ತರವನ್ನು ಹೊಂದದ ಪ್ರಶ್ನೆಗಳು ನಿಮ್ಮಲ್ಲಿದ್ದರೆ, ಇದನ್ನು ನಿಮಗೆ ಕೊಟ್ಟ ವ್ಯಕ್ತಿಯೊಂದಿಗೆ ಮಾತನಾಡಿ.

## ದೃಷ್ಟಾಂತಗಳು ಮತ್ತು ವ್ಯಾಖ್ಯಾನಗಳು

**ಕ್ಷಮಾಪಣೆ.**
ಕ್ಷಮಾಪಣೆ. ನಮ್ಮ ಪಾಪಗಳ ಕ್ಷಮಾಪಣೆಗಾಗಿ ಸತ್ಯವೇದಕ್ಕೆ ಅನುಸಾರವಾದ ಕ್ರಯವನ್ನು ಕೊಡಬೇಕು. ಪಾಪದ ಕ್ರಯವು ನಿತ್ಯವಾಗಿ ದೇವರಿಂದ ಬೇರ್ಪಡಿಸಲ್ಪಡುವುದು. ಸತ್ಯವೇದಕ್ಕೆ ಅನುಸಾರವಾದ ಕ್ಷಮಾಪಣೆಯು ನಿಮ್ಮ ಪಾಪಗಳನ್ನು ಮತ್ತು ಅದರ ಕ್ರಯವನ್ನು ನಿಮ್ಮಿಂದ ಯೇಸುವಿಗೆ ವರ್ಗಾಯಿಸುವುದು. ದೇವರು ನಮ್ಮ ಪಾಪವನ್ನು ಮತ್ತು ಅದರ ಶಿಕ್ಷೆಯನ್ನು ಪಾಪರಹಿತ ಯೇಸುವಿಗೆ ಕೊಟ್ಟನು. ನಂತರ ದೇವರು ತನ್ನ ನೀತಿಯನ್ನು ನಮಗೆ ಕೊಟ್ಟನು. ಪರಲೋಕದಲ್ಲಿ ಅದು ಎರಡು ಪುಸ್ತಕಗಳನ್ನು ಹೊಂದಿರುವಂತೆ. ಮೊದಲನೆಯದು, ನಿಮ್ಮ ದಾಖಲೆಯ ಪುಸ್ತಕ, ಅದರಲ್ಲಿ ನೀವು ಮಾಡಿದ ಎಲ್ಲಾ ತಪ್ಪುಗಳನ್ನು ಗುರುತಿಸಲಾಗಿದೆ. ಪುಟಗಳು ಗುರುತುಗಳನ್ನು ಒಳಗೊಂಡಿದೆ. ನಾವು ಮಾಡುವ ಕೆಲವು ಸಂಗತಿಗಳು ಪಾಪವಾಗಿದೆ (ಅರಿಕೆಮಾಡಿದ ಪಾಪಗಳು) ಮತ್ತು ನಾವು ಮಾಡದ ಕೆಲವು ಸಂಗತಿಗಳು ಕೂಡ ಪಾಪವಾಗಿದೆ (ಬಿಟ್ಟುಬಿಡುವ ಪಾಪಗಳು). ಕೆಲವು ಆಲೋಚನೆಗಳೂ ಸಹ ಪಾಪವಾಗಿವೆ. ದಿನಕ್ಕೆ ಮೂರು ಪಾಪಗಳಂತೆ ಒಂದು ವರ್ಷಕ್ಕೆ 1,000 ಕ್ಕೆ ಸಮಾನವಾಗಿದೆ. ಜೀವನ ಪರ್ಯಂತರ, ಅದು ಬಹು ಪಾಪಗಳಾಗಿವೆ. ಮತ್ತೊಂದು ಪುಸ್ತಕವು ಪಾಪರಹಿತ ಯೇಸುವಿನ ದಾಖಲೆಯ ಪುಸ್ತಕವಾಗಿದೆ. ಅದರ ಹಾಳೆಗಳು ಶುದ್ಧ ಮತ್ತು ನಿಷ್ಕಳಂಕವಾಗಿವೆ. ಯೇಸುವಿನಲ್ಲಿ ನೀವು ನಂಬಿಕೆಯಿಡುವಾಗ, ಆ ಎರಡು ಪುಸ್ತಕಗಳ ಮುಖಪುಟಗಳನ್ನು ಬದಲಾಯಿಸಿಕೊಂಡಂತೆ ಇರುತ್ತದೆ. ನಂತರ ನಿಮ್ಮ ಹೆಸರಿನಲ್ಲಿರುವ ದಾಖಲೆಯ ಪುಸ್ತಕವು ಸಂಪೂರ್ಣವಾಗಿ ಶುದ್ಧವಾಗಿರುತ್ತದೆ. ನಿಮ್ಮ ಪಾಪ ಮತ್ತು ಅದರ ಶಿಕ್ಷೆಯನ್ನು ತೆಗೆದುಹಾಕಲಾಗಿದೆ.

**ನಿಜವಾದ ಪರಿಹಾರ.**
ಯೇಸು ಹೀಗೆ ಹೇಳಿದನು, *"ಯೇಸು ಅವನಿಗೆ - ನಾನೇ ಮಾರ್ಗವೂ ಸತ್ಯವೂ ಜೀವವೂ ಆಗಿದ್ದೇನೆ; ನನ್ನ ಮೂಲಕವಾಗಿ ಹೊರತು ಯಾರೂ ತಂದೆಯ ಬಳಿಗೆ ಬರುವದಿಲ್ಲ"* ಯೋಹಾನ 14:6. ನಮ್ಮ ಪಾಪವು ದೇವರಿಂದ ಅಗಲಿಸಿದ್ದಕ್ಕಾಗಿ ಸತ್ಯವೇದದಿಂದ ಸಿಕ್ಕ ಪರಿಹಾರವು ಅನನ್ಯವಾಗಿದೆ. ಬೇರೆ ಧರ್ಮಗಳು ನಮ್ಮ ಪಾಪಗಳಿಗಾಗಿ ನಿತ್ಯವಾಗಿ ಅನುಭವಿಸಬೇಕೆಂದು ಬಯಸುತ್ತವೆ, ನಮ್ಮಲ್ಲಿ ಇನ್ನೂ ಇರಬಹುದಾದ ಪಾಪಗಳನ್ನು ದೇವರು ಕಡೆಗಣಿಸುತ್ತಾನೆ ಎಂಬ ಭರವಸೆಯನ್ನು ಹೊಂದಿರುತ್ತಾರೆ. ನಮ್ಮ ಪಾಪಗಳನ್ನು ಕ್ಷಮಿಸುವ ಯೇಸುವಿನ ಮಾರ್ಗವು ಅನನ್ಯವಾಗಿದೆ ... ನಮ್ಮನ್ನು ಶುದ್ಧಿ ಮಾಡುತ್ತಾನೆ. ನಮ್ಮ ಪಾಪಗಳು ಯೇಸುವಿಗೆ ವಹಿಸಲ್ಪಟ್ಟು ಅವುಗಳನ್ನು ಅಳಿಸಿಹಾಕಿದ್ದರಿಂದ ನಾವು ದೇವರನ್ನು ಮತ್ತು ನಿತ್ಯತ್ವವನ್ನು ಎದುರುಗೊಳ್ಳುತ್ತೇವೆ. ಅಪೊಸ್ತಲನಾದ ಪೇತ್ರನು ಹೀಗೆ ಹೇಳಿದನು, *"ಬರಬೇಕಾದ ರಕ್ಷಣೆಯು ಇನ್ನಾರಲ್ಲಿಯೂ ಸಿಕ್ಕುವದಿಲ್ಲ; ಆ ಹೆಸರಿನಿಂದಲೇ ಹೊರತು ಆಕಾಶದ ಕೆಳಗೆ ಮನುಷ್ಯರೊಳಗೆ ಕೊಡಲ್ಪಟ್ಟಿರುವ ಬೇರೆ ಯಾವ ಹೆಸರಿನಿಂದಲೂ ನಮಗೆ ರಕ್ಷಣೆಯಾಗುವದಿಲ್ಲ ಎಂದು ಹೇಳಿದನು"* ಅಪೊ ಕೃ 4:12. ಅಪೊಸ್ತಲನಾದ ಪೌಲನು ಹೀಗೆ ಹೇಳಿದನು, *"ಏಕಂದರೆ ದೇವರು ಒಬ್ಬನೇ; ದೇವರಿಗೂ ಮನುಷ್ಯರಿಗೂ ಮಧ್ಯಸ್ಥನು ಒಬ್ಬನೇ; ಆತನು ಮನುಷ್ಯನಾಗಿರುವ ಕ್ರಿಸ್ತ ಯೇಸುವೇ; ಆತನು ಎಲ್ಲರ ವಿಮೋಚನಾರ್ಥವಾಗಿ ತನ್ನನ್ನು ಒಪ್ಪಿಸಿಬಿಟ್ಟನು. ಇದೇ ತಕ್ಕ ಸಮಯಗಳಲ್ಲಿ ಹೇಳಬೇಕಾದ ಸಾಕ್ಷಿಯು,"* 1 ತಿಮೊಥೆಯನಿಗೆ 2:5-6. ಯೇಸುವಿನ ಮಾರ್ಗವು ನಿಜವಾದ ಪರಿಹಾರವಾಗಿದೆ.

**ಯೇಸುವನ್ನು ನಂಬುವುದು.**
ಯೇಸುವನ್ನು ನಂಬುವುದು ಯೇಸುವನ್ನು ಕುರಿತು ನಂಬುವುದಕ್ಕಿಂತ ಹೆಚ್ಚಿನದಾಗಿದೆ. ನೀವು ವಿಮಾನದಲ್ಲಿ ಕುಳಿತು ಬೆಟ್ಟಗಳಿಗಿಂತ ಎತ್ತರದಲ್ಲಿ ಹಾರಾಡುತ್ತಿರುವಾಗ, ಆಗ ತಕ್ಷಣ ಎಂಜಿನ್ ಚಿಕ್ಕದಾಗಿ ಸ್ಫೋಟಿಸಲು ಪ್ರಾರಂಭಿಸಿ ವಿಫಲವಾಗುತ್ತದೆ. ವಿಮಾನವು ಬೆಂಕಿಯಿಂದ ಉರಿದು ಪತನವಾಗಲಿರುತ್ತದೆ. ವಿಮಾನ ಚಾಲಕನು ಪ್ಯಾರಚೂಟಿನ ಮೂಲಕ ತೆರೆದ ವಿಮಾನ ಬಾಗಿಲಿನಿಂದ ಹೊರಕ್ಕೆ ಹೋಗುವಂತೆ ಸೂಚಿಸುತ್ತಾನೆ. ನಿಮಗೆ ಪ್ಯಾರಚೂಟನ್ನು ಕುರಿತು ತಿಳಿದಿರುತ್ತದೆ. ನೀವು ಅದನ್ನು ದೂರದರ್ಶನದಲ್ಲಿ ನೋಡಿರುತೀರಿ. ಆದರೆ ಈಗ ಅದು ಬೇರೆ ರೀತಿಯದ್ದಾಗಿದೆ. ಆ ವಿಮಾನದಿಂದ ಹೊರಕ್ಕೆ ಹೋಗುವುದು ಪ್ಯಾರಚೂಟಿಗಿಂತ ನಂಬಿಕೆಯ ಕುರಿತು ತಿಳಿದುಕೊಳ್ಳುವುದು ಹೆಚ್ಚಿನದಾಗಿದೆ ... ಅದು ಪ್ಯಾರಚೂಟಿನಲ್ಲಿಡಬೇಕಾದ ನಂಬಿಕೆಯನ್ನು ಕೋರುತ್ತದೆ. ಕೆಲವು ಪ್ರಯಾಣಿಕರ ಬೆನ್ನುಹೊರೆಯು ಕೆಲಸ ಮಾಡುವದಿಲ್ಲ. ನೀವು ಬದುಕುಳಿಯಬೇಕಾದರೆ ಸರಿಯಾದ ಪ್ಯಾರಚೂಟಿನ ಅವಶ್ಯಕತೆಯಿದೆ ... ಅದಿಲ್ಲದೆ ಹೊರಕ್ಕೆ ಕಾಲಿಡುವುದರಿಂದ ಮರಣವು ಖಚಿತವಾಗಿರುತ್ತದೆ. ಪ್ಯಾರಚೂಟಿನಿಂದ ಹೊರಕ್ಕೆ ಕಾಲಿಡುವುದು 100% ನಂಬಿಕೆಯ ಬದ್ಧತೆಯಾಗಿದೆ. ನಿಮಗೆ ಕೆಲವು ಸಂಶಯಗಳಿರಬಹುದು ... ಆದರೆ ಬದುಕಬೇಕಾದರೆ ಪ್ಯಾರಚೂಟಿನ ಮೇಲೆ ಸಂಪೂರ್ಣವಾದ ನಂಬಿಕೆಯ ಅಗತ್ಯವಿದೆ. ಯೇಸು ಒಬ್ಬನೇ ನಿಜವಾದ ಸದಾಕಾಲವಿರುವ ಪ್ಯಾರಚೂಟಾಗಿದ್ದಾನೆ. ನಂಬಿಕೆಯಿಂದ ಹೊರಕ್ಕೆ ಹೆಜ್ಜೆಯಿಡಿ. ಆತನಲ್ಲಿ ನಂಬಿಕೆಯಿಡಿ!

**ಮುದ್ರಣಕ್ಕೆ ಸೂಚನೆಗಳು.** ಹಾಳೆಯ ಎರಡು ಬದಿಯಲ್ಲಿ ಮುದ್ರಿಸುವಂತೆ ಸೂಚಿಸಲಾಗಿದೆ. ಬಣ್ಣದಲ್ಲಿ ಅಥವಾ ಕಪ್ಪು-ಬಿಳುಪಿನಲ್ಲಿ ಮುದ್ರಿಸಿ.

---

*ದೇವರಿಂದ ಕ್ಷಮಿಸಲ್ಪಟ್ಟಿರುವುದು* © 2024 ಇದು ಆಕ್ಸ್ ಒನ್‌ಯೆಯಿಟ್ ಮತ್ತು www.Gospel316.org. ಇವರಿಂದಮುದ್ರಿಸಲಾಗಿದೆ. ನೀವು ಉಚಿತವಾಗಿ ಮುದ್ರಿಸಬಹುದು, ನಕಲಿ ಮಾಡಬಹುದು, ಹಂಚಿಕೊಳ್ಳಬಹುದು, ಅಥವಾ ಸಂದೇಶವನ್ನು ಬದಲಿಸದೆ ಈ ಪೂರ್ಣ ಹೇಳಿಕೆಯೊಂದಿಗೆ ಹಂಚಿಕೊಳ್ಳಬಹುದು. ಹೇಗಾದರೂ, ನೀವು ನಿಮ್ಮ ಸ್ವಂತ ಸೇವೆ ಅಥವಾ ಅಭೆಯ ಹೆಸರು ಅಥವಾ ಗುರುತನ್ನು ಹಂಚಿಕೊಳ್ಳಬಹುದು. ಆಕ್ಸ್ ಒನ್‌ಯೆಯಿಟ್ ಸತ್ಯವೇದದ ಮೇಲೆ ಮಾತ್ರ ಆಧಾರಗೊಂಡಿದೆ. ಜನರು ಯೇಸು ಕ್ರಿಸ್ತನ ನಂಬಿಕೆಗೆ ಬರುವಂತೆ ಮತ್ತು ಬೆಳೆದು ಆತನ ಶಿಷ್ಯರಾಗುವಂತೆ ಸಹಾಯ ಮಾಡಲು ಇದು ಅಸ್ತಿತ್ವದಲ್ಲಿದೆ. ಆಂಗ್ಲ ಭಾಷೆಯಲ್ಲಿ ಭಾಷಾಂತರವನ್ನು ಹೊರತುಪಡಿಸಿ ಇತರೆ ಭಾಷಾಂತರ ಸೇವೆಗಳನ್ನು www.ChristianLingua.com ಇವರಿಂದ ಕೊಡಲಾಗಿದೆ. ಆಂಗ್ಲ ಭಾಷೆಯಲ್ಲಿ ಸತ್ಯವೇದದ ಮೂಲ ಉಲ್ಲೇಖಗಳನ್ನು ನ್ಯೂ ಅಮೇರಿಕನ್ ಸ್ಟ್ಯಾಂಡರ್ಡ್ ವರ್ಷನ್ (NASB) ರಲ್ಲಿದೆ. ಸತ್ಯವೇದದ ಉಲ್ಲೇಖಗಳು ಈ ಭಾಷಾಂತರದಲ್ಲಿ "ಕನ್ನಡ ಸತ್ಯವೇದ J.V. (BSI)" ಯಿಂದ ಆರಿಸಲಾಗಿದೆ.